# ಕೂಡಿ ಬಾಳಿದರೆ ಸ್ವರ್ಗ ಸುಖ

ಗಾದೆಗಳು ವೇದಗಳಿಗೆ ಸಮ ವೇದ ಸುಳ್ಳಾದರು ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು. ಹೌದು ಕೂಡಿ ಬಾಳುವುದರಲ್ಲಿ ಪ್ರೀತಿ, ಕಾಳಜಿ ಮತ್ತು ಭದ್ರತೆಯು ಸಿಗುತ್ತದೆ. ‘ಕೂಡಿ ಬಾಳಿದರೆ ಸ್ವರ್ಗ ಸುಖ’ ಎಂಬ ಗಾದೆ ಒಗ್ಗಟ್ಟಾಗಿ ಬಾಳುವುದರಲ್ಲಿ ಸುಖವಿದೆ ಎಂದು ಹೇಳುತ್ತದೆ.

ದ್ವೇಷ, ಅಸೂಯೆ, ಜಗಳಗಳು ಇಲ್ಲದೆ, ಅನ್ಯೋನ್ಯತೆಯಿಂದ ಜೀವಿಸಬೇಕು. ಒಟ್ಟಿಗೆ ಬಾಳುವುದು ಮನೆಯ ಒಟ್ಟು ಕುಟುಂಬಕ್ಕೆ ಅಷ್ಟೇ ಅಲ್ಲದೇ, ನಮ್ಮ ಊರಲ್ಲಿ, ದೇಶದಲ್ಲಿ, ಸಮಾಜದಲ್ಲಿ ಕೂಡ ಒಗ್ಗಟ್ಟಾಗಿರಬೇಕು. ಮನೆಯೇ ಮೊದಲ ಪಾಠ ಶಾಲೆ. ಮನೆಯಲ್ಲಿ ನಾವು ಕೂಡಿ ಬಾಳಿದರೆ ಸಮಾಜದಲ್ಲಿ, ಊರಿನಲ್ಲಿ, ದೇಶದಲ್ಲಿ ಕೂಡಿ ಬಾಳುವ ನಿಯಮ ಪಾಲನೆ, ಶಿಸ್ತು ಪಾಲಿಸಲು ಸುಲಭ. ಇಲ್ಲಿ ಬದುಕು ಸುಭದ್ರವಾಗಿರುತ್ತದೆ.

ನಾವು ವಾಸಿಸುತ್ತಿರುವ ನಮ್ಮ ಸಮಾಜದಲ್ಲಿ ಅನೇಕ ಜಾತಿಮತಗಳು, ವಿವಿಧ ಪರಂಪರೆಗಳು ಇವೆ. ಹಾಗೇ ಹಬ್ಬಗಳು ಆಚರಣೆಗಳು ಬೇರೆ ಬೇರೆಯಾಗಿವೆ. ನಾವು ಒಟ್ಟಾಗಿ ಬೇಧಭಾವಗಳಿಲ್ಲದೆ, ಈ ಎಲ್ಲಾ ಹಬ್ಬಗಳಲ್ಲಿ ಸ್ನೇಹದಿಂದ ಭಾಗವಹಿಸಿಬೇಕು, ಎಲ್ಲಾ ತೊಂದರೆ, ಸಮಸ್ಯೆಗಳನ್ನು ಎದುರಿಸಲು ಕೂಡಿ ಬಾಳುವುದೇ ಒಳ್ಳೆಯದು.